ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 'ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ '

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾಪದ ಅಂಗೀಕಾರ

ಶ್ರೀ ಆರ್.ಬಿ. ತಿಮ್ಮಾಪೂರ್ (ಕೃಷ್ಣಿ ಮಾರುಕಟ್ಟೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕ 2000 ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 'ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕ 2000 ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು '

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಉಪಾಧ್ಯಕ್ಷರು : ಮಾನ್ಯ ಸದಸ್ಯರುಗಳು ಇಚ್ಛಿಪಟ್ಟರೆ ರಾಜ್ಯದಲ್ಲಿ ರೈತರು ಬೆಳೆದಿರುವ ಮೆಕ್ಕೆ ಜೋಳ, ಭತ್ತ, ಆಲೂಗಡ್ಡೆ, ಎಣ್ಣೆ ಕಾಳುಗಳು, ತೊಗರಿ ಹಾಗೂ ತೆಂಗಿನ ಬೆಳೆಗಳ ಕುಸಿದಿರುವ ಬಗ್ಗೆ ನಿಯಮ 69ರ ಮೇರೆಗೆ ಚರ್ಚೆ ಪ್ರಾರಂಭಿಸಬಹುದು.

ನಿಯಮ 69ರ ಮೇರೆಗೆ ಚರ್ಚೆ

ರಾಜ್ಯದಲ್ಲಿ ರೈತರು ಬೆಳೆದಿರುವ ಮೆಕ್ಕೆ ಜೋಳ, ಭತ್ತ, ಆಲೂಗೆಡ್ಡೆ, ಎಣ್ಣೆ ಕಾಳುಗಳು, ತೊಗರಿ ಹಾಗೂ ತೆಂಗಿನ ಬೆಲೆಗಳು ಕುಸಿದಿರುವ ಬಗ್ಗೆ.

+ ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ) : ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಇಂದು ಚರ್ಚೆಯನ್ನು ಪ್ರಾರಂಭ ಮಾಡಿ ನಾಳೆಗೆ ಮುಂದುವರೆಸುತ್ತೇನೆ. ಕೃಷಿ ಉತ್ಪನ್ನಗಳ ಬೆಲೆ ಕುಸಿದಂಥ ವಿಚಾರದ ಬಗ್ಗೆ ಎಲ್ಲಾ ಸದಸ್ಯರು ಇಷ್ಟೊಂದು ನಿಶ್ಚೇಷ್ಟವಾಗಿರುವ ಸಂದರ್ಭದಲ್ಲಿ ಚರ್ಚೆಗೆ ತೆಗೆದುಕೊಳ್ಳುವುದು ಸೂಕ್ತವಲ್ಲ. ಆದ್ದರಿಂದ ದಯಮಾಡಿ ನಾಳೆ ಬೆಳಿಗ್ಗೆ ಎಲ್ಲರ ಮನಸ್ಸು ಸ್ವಚ್ಛವಾಗಿದ್ದಾಗ ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಅದಕ್ಕೆ ನನ್ನ ಅಭ್ಯಂತರವೇನಿಲ್ಲ. ಆದರೆ ಇದರ ಬಗ್ಗೆ ಮಾತನಾಡುವವರು ಬಹಳ ಜನರು ಇರುವುದರಿಂದ ಅವರು ಮಾತನಾಡಲಿ. ತಾವು ಬೇಕಾದರೆ ನಾಳೆ ಬೆಳಿಗ್ಗೆ ಮಾತನಾಡಿ.

ಶ್ರೀ ವೈ.ಕೆ. ರಾಮಯ್ಯ : ತಾವು ಈಗ ಮಾತನಾಡಲೇ ಬೇಕು ಎಂದು ಅಪ್ಪಣೆ ಮಾಡುವುದಾಗಿದ್ದರೆ ನಾನೇ ಪ್ರಾರಂಭ ಮಾಡುತ್ತೇನೆ.

ಉಪಾಧ್ಯಕ್ಷರು : ಚರ್ಚೆ ಮಾಡಲೇ ಬೇಕು ಎಂದು ಒತ್ತಾಯವೇನಿಲ್ಲ. ಇದರ ಬಗ್ಗೆ ಬಹಳ ಜನರು ಮಾತನಾಡಬೇಕಾಗಿದೆ. ತಾವುಗಳೆಲ್ಲರೂ ಸಹನೆಯಿಂದ ಕುಳಿತುಕೊಂಡು ಇದರಲ್ಲಿ ಭಾಗವಹಿಸುತ್ತೇನೆ ಎಂದರೆ ಮುಂದುವರೆಸುತ್ತೇನೆ. ಬೇಡ ಎಂದರೆ ನಾಳೆಗೆ ತೆಗೆದುಕೊಳ್ಳೋಣ. ತಾವು ಪ್ರಾರಂಭ ಮಾಡಿ ಸ್ವಲ್ಪ ಮಾತನಾಡಿ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿ ಕೃಷಿ ಉತ್ಪನ್ನಗಳ ಬೆಲೆ ಕುಸಿದಿರುವುದರ ಬಗ್ಗೆ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ನಮ್ಮ ವಿರೋಧ ಪಕ್ಷದ ನಾಯಕರು ಈ ವಿಚಾರವನ್ನು ಚರ್ಚೆಗೆ ತಂದು ಅತ್ಯಂತ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಈ ವಿಚಾರದಲ್ಲಿ ಸಾಕಷ್ಟು ಚರ್ಚೆ ಈ ಹಿಂದೆ ಆಗಿದೆ. ಇತ್ತೀಚೆಗೆ ಕೃಷಿ ಉತ್ಪನ್ನಗಳ ಬೆಲೆ ಕುಸಿತಕ್ಕೆ ಕಾರಣಗಳನ್ನು, ಪರಿಹಾರವನ್ನು ಕಂಡುಹಿಡಿಯುವ ಪ್ರಯತ್ನ ನಡೆಯದೆಯೇ ಕೃಷಿ ಉದ್ಯಮಕ್ಕೆ ಹೊಂದಿಕೊಂಡಂತೆ ಇರುವ ಎಲ್ಲಾ ಮಜಲುಗಳನ್ನು ಜಾಲಿಸಿ ಆಡುವಂಥ ಪ್ರಯತ್ನ ಸದನದಲ್ಲಿ ನಡೆದಿದೆ. ಇದು ತಪ್ಪೇನಲ್ಲ. ನನ್ನ ಮಟ್ಟಿಗೆ ಕೃಷಿ ಉತ್ಪನ್ನಗಳ ಉತ್ಪತ್ತಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಹೊರತುಪಡಿಸಿ, ಕೃಷಿ ಉತ್ಪನ್ನಗಳು ಉತ್ಪಾದನೆಯಾದಮೇಲೆ ಮಾರುಕಟ್ಟೆ, ಸಮಸ್ಯೆಗಳು, ಅಥವಾ ಆಡಳಿತ ವ್ಯವಸ್ಥೆಯಿಂದಾಗಿ ಕೃಷಿ ಉತ್ಪನ್ನಗಳ ಬೆಲೆ ಏಕೆ ಕಡಿಮೆಯಾಗುತ್ತಿದೆ, ಅದಕ್ಕೆ ಏನು ಪರಿಹಾರವನ್ನು ಕಂಡುಕೊಳ್ಳಬಹುದು ಎಂಬ ಬಗ್ಗೆ ಮಾತ್ರ ನಾನು ವಿಷಯವನ್ನು ಪ್ರಸ್ತಾಪ ಮಾಡುವ ಪ್ರಯತ್ನ ಮಾಡುತ್ತೇನೆ. ಈ ರೀತಿ ಬೆಲೆ ಕುಸಿತಕ್ಕೆ ನನ್ನ ಪ್ರಕಾರ ಮೊದಲನೆಯ ಕಾರಣ ಸಮೃದ್ಧಿಯಾದಂಥ ಬೆಳೆ. ಇದಕ್ಕೆ ತಕ್ಷಣ ಪರಿಹಾರ ಸಮೃದ್ಧಿಯಾಗಿ ಬೆಳೆಯುವುದನ್ನು ನಿಲ್ಲಿಸಿವುದೇ ಏಕೆಂದರೆ ಯಾವುದೇ ವಸ್ತುವಿನ ಬೆಲೆ ಯಾವಾಗಲೂ ಪೂರೈಕೆ ಮತ್ತು ಬೇಡಿಕೆಯ ಮೇಲೆ ಅವಲಂಬಿಸಿರುತ್ತದೆ. ಈಗ ನಮ್ಮಲ್ಲಿ ಸಮೃದ್ಧಿಯಾಗಿ ಮಳೆಯಾಗಿರುವುದರಿಂದ ಉತ್ಪತ್ತಿ ಜಾಸ್ತಿಯಾಗಿದೆ. ಐದುನೂರು ರೂಪಾಯಿ ಇದ್ದಂಥ ರಾಗಿ ಏಕಾ ಏಕಿ 300 ರೂಪಾಯಿಗಳಿಗೆ ಇಳಿದಿದೆಯೆಂದರೆ ಇದರ ಬಗ್ಗೆ ನಾವು ಆರ್ಥಿಕ ತಜ್ಞರ ಹತ್ತಿರ ಹೋಗುವ ಅವಶ್ಯಕತೆ ಇಲ್ಲ. ಉತ್ಪತ್ತಿ ಜಾಸ್ತಿಯಾಗಿದೆ ಆದ್ದರಿಂದ ಬೆಲೆ ಕಡಿಮೆಯಾಗಿದೆ. ಆದ್ದರಿಂದ ಉತ್ಪತ್ತಿಯನ್ನೇ ಕಡಿಮೆ ಮಾಡುವುದು ಸರಿಯೇ? ಅದೂ ಆಗುವುದಿಲ್ಲ. ಏಕೆಂದರೆ ಈ ದೇಶದಲ್ಲಿ ಸಂಪತ್ತಿನ ಸೃಷ್ಟಿಯಾಗಿದೆ. ಕೃಷಿ ಉತ್ಪನ್ನಗಳ ಉತ್ಪತ್ತಿ ಈ ರಾಷ್ಟ್ರಕ್ಕೆ ಎಷ್ಟು ಬೇಕೋ ಅಷ್ಟು ಆಗಿದೆ. ಆದಕ್ಕಾಗಿ ರಾಷ್ಟ್ರದ ತಜ್ಞರನ್ನು, ಕೃಷಿ ವಿಜ್ಞಾನಿಗಳನ್ನು ನಾನು ಅಭಿನಂದಿಸುತ್ತೇನೆ. ಬೆಲೆಯನ್ನು ಜಾಸ್ತಿ ಮಾಡಲು ನಾವು ಮಾಡಬೇಕಾಗಿರುವ ಸಣ್ಣ ಕೆಲಸವೇನೆಂದರೆ ಉತ್ಪತ್ತಿಯನ್ನು ಕಡಿಮೆ ಮಾಡುವುದು. ಆದರೆ ಇದು ಸಾಧ್ಯವಿಲ್ಲ. ಏಕೆಂದರೆ ಆರ್ಥಿಕ ತಜ್ಞರಾದ ಶ್ರೀ ಎಸ್. ಶೇಷಾದ್ರಿಯವರ ಪ್ರಕಾರ ಈ ದೇಶದಲ್ಲಿ ಸಂಪತ್ತಿನ ಉತ್ಪತ್ತಿಯಾಗಿದೆ. ಆದರೆ ಅದರ ವಿತರಣೆ ಸಮವಾಗಿ ಆಗಿಲ್ಲ. ಪಂಜಾಬ್‌ನಲ್ಲಿ

ಗೋಧಿಯನ್ನು ಯಥೇಚ್ಚವಾಗಿ ಬೆಳೆದು ತುಂಬಲು ಸಾಧ್ಯಾವಾಗದೆ ರಾಶಿ ರಾಶಿಯಾಗಿ ಬಿದ್ದಿದೆ. ಆದರೆ ಬೆಂಗಳೂರಿನ ಬಸ್ ಸ್ಟ್ಯಾಂಡ್‌ನಲ್ಲಿ ತಿನ್ನಲು ಅನ್ನವಿಲ್ಲದೆ ಮಲಗಿಕೊಂಡಿರುವವರು ನೂರಾರು ಜನರು ಇದ್ದಾರೆ. ಅದರ ಅರ್ಥವೇನೆಂದರೆ ನಮ್ಮಲ್ಲಿ ಉತ್ಪಾದನೆ ಜಾಸ್ತಿಯಾಗಿದ್ದರೂ ಕೊಂಡುಕೊಳ್ಳುವ ಶಕ್ತಿಯನ್ನು ಸಾಮಾನ್ಯ ವ್ಯಕ್ತಿಯಲ್ಲಿ ವೃದ್ಧಿಸುವಲ್ಲಿ ಕೆಲಸದಲ್ಲಿ ನಮ್ಮ ಆಡಳಿತ ವಿಫಲವಾಗಿದೆ. It is true there is an increase in the agricultural produce, but at the same time, the distribution of the increase is not evenly done. ಉತ್ಪತ್ತಿ ಜಾಸ್ತಿಯಾಗಿರುವುದರಿಂದ ಬೆಲೆ ಕಡಿಮೆಯಾಗಿದೆ, ಬೆಲೆಯನ್ನು ಇಳಿಸಬೇಕು ಎನ್ನುವುದು ಬುದ್ಧಿವಂತಿಕೆಯ ಲಕ್ಷಣವಲ್ಲ. ಈ ಬೆಲೆ ಹೆಚ್ಚಳಕ್ಕೆ ಯಾರು ಕಾರಣ? ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಕಾರಣವೇ ಎಂಬ ಬಗ್ಗೆ ಮಗುಮ್ಮಾಗಿ ನಮ್ಮ ಸ್ನೇಹಿತರು ನೇರವಾಗಿ ಪ್ರಸ್ತಾಪ ಮಾಡದೆ ಹೇಳಿದ್ದಾರೆ. ಆದರೆ ನಾನು ವಿಷಯಕ್ಕೆ ನೇರವಾಗಿ ಬರಲು ಇಷ್ಟಪಡುತ್ತೇನೆ. ನಮ್ಮ ಹಳ್ಳಿಗಾಡಿನಲ್ಲಿ ಒಂದು ಕಥೆ ಇದೆ. ಒಬ್ಬನಿಗೆ ಇಬ್ಬರು ಹೆಂಡತಿಯರು ಇದ್ದರು. ಅದರಲ್ಲಿ ಒಬ್ಬಳಿಗೆ ವಯಸ್ಸಾಗಿತ್ತು ಮತ್ತೊಬ್ಬಳು ಬಹಳ ಚಿಕ್ಕ ವಯಸ್ಸಿನವಳು. ವಯಸ್ಸಾದವಳಿಗೆ ನನ್ನ ಗಂಡ ವಯಸ್ಸಾದವನಂತೆ ಕಾಣಬೇಕು ಎಂಬ ಆಸೆ, ಆದ್ದರಿಂದ ಅವಳು ಗಂಡನ ಕಪ್ಪು ಕೂದಲುಗಳನ್ನೆಲ್ಲ ಕಿತ್ತು ಹಾಕುತ್ತಿದ್ದಳು. ಹುಡುಗಿಯಾಗಿದ್ದವಳಿಗೆ ನನ್ನ ಗಂಡ ಹುಡುಗನಂತೆ ಕಾಣಬೇಕೆಂಬ ಆಸೆ, ಆದ್ದರಿಂದ ಅವಳು ಗಂಡನ ತಲೆಯ ಬಿಳಿ ಕೂದಲುಗಳನ್ನೆಲ್ಲ ಕಿತ್ತುಹಾಕೋದು. ಹೀಗೆ ಮಾಡಿ ಅವನ ತಲಯ ಕೂದಲೆಲ್ಲ ಹೋಗಿ ನುಣ್ಣಗೆ ಆಗಿಬಿಟ್ಟಿತು. ನಮ್ಮ ಪರಿಸ್ಥಿತಿ ಅದೇ ಸ್ಥಿತಿಗೆ ಬಂದಿದೆ. ಈ ಬೆಲೆ ಕುಸಿತದಿಂದ ಆಗಿರುವ ಪರಿಣಾಮದಿಂದ ಕೃಷಿ ಉತ್ಪನ್ನದಲ್ಲಿ ಜೀವನ ಮಾಡಬೇಕಾಗಿರುವ ವ್ಯಕ್ತಿಯ ಬದುಕು ಬಹಳ ಕೆಟ್ಟ ಮಟ್ಟವನ್ನು ತಲುಪಿದೆ. ಇದು ಯಾವ ಸರ್ಕಾರದಿಂದ ಆಗಿದೆ ಎಂಬುದಕ್ಕಿಂತ ಇದಕ್ಕೆ ಇರುವ ನಿಜವಾದ ಕಾರಣಗಳೇನು? ಕಂಡುಕೊಳ್ಳಬೇಕಾದ ಪರಿಹಾರವೇನು? ಎಂಬ ಬಗ್ಗೆ ಹುಡುಕಬೇಕಾದ್ದು ನಮ್ಮೆಲ್ಲರ ಕರ್ತವ್ಯ. ನನಗೂ ಕೆಲವು ದೇಶಗಳನ್ನು ನೋಡುವಂಥ ಅವಕಾಶ ಸಿಕ್ಕಿತ್ತು, ಹಾಗಾಗಿ ತಮಗೆ ಹೇಳುವುದಾದರೆ ಕೃಷಿ ವಿಷಯದಲ್ಲಿ ಎಲ್ಲಾ ದೇಶಗಳಲ್ಲಿ ಎಲ್ಲಾ ಕಾಲಕ್ಕೂ ಕೃಷಿಕನ ಬದುಕೇ ನಿಕೃಷ್ಟದ್ದಾಗಿದೆ, ಎಂಬ ತೀರ್ಮಾನಕ್ಕೆ ನಾನು ಬಂದಿದ್ದೇನೆ. ಅದು ಭಾರತ ದೇಶಕ್ಕೆ, ಅಮೇರಿಕಾ ದೇಶಕ್ಕೆ, ಕರ್ನಾಟಕಕ್ಕೆ ಸೀಮಿತವಾದದ್ದಲ್ಲ. ಎಲ್ಲಾ ರಾಷ್ಟ್ರಗಳಲ್ಲಿ, ರಾಜ್ಯಗಳಲ್ಲಿ ಎಲ್ಲಾ ಕಾಲಕ್ಕೆ ಅತ್ಯಂತ ನಿಕೃಷ್ಟವಾದಂಥ ಬದುಕು ರೈತನ ಬದುಕು. ಇದಕ್ಕೆ ಈ ದೇಶದ ವ್ಯವಸ್ಥೆ ಮಾತ್ರ ಕಾರಣವಲ್ಲ. ಇಡೀ ವಿಶ್ವದಲ್ಲಿ ಇರುವ ವ್ಯವಸ್ಥೆಯೇ ಕಾರಣವೆಂದು ನನಗನ್ನಿಸುತ್ತದೆ. ನನ್ನ ಸ್ನೇಹಿತರು ತಂದಿರುವ ವಿಚಾರದಲ್ಲಿ ನನ್ನದೊಂದು ಸಣ್ಣ ತಿದ್ದುಪಡಿ. ಕೇವಲ ಬೆಲೆ ಕುಸಿತ ನಮ್ಮ ಸಮಸ್ಯೆಯಲ್ಲ. ನಮ್ಮ ಮುಖ್ಯವಾದ ಸಮಸ್ಯೆ ಕೃಷಿ ಉತ್ಪನ್ನಗಳ ಬೆಲೆಗಳಲ್ಲಿನ ಅನಿಶ್ಚಿತತೆ, ಏರಿಳಿತ. ಟೊಮ್ಯಾಟೋವನ್ನು ಒಂದು ದಿವಸ 25 ರೂಪಾಯಿಗಳಿಗೆ ಮಾರಾಟ ಮಾಡಿದ್ದೂ ಇದೆ, ಒಂದು ದಿವಸ 25 ಪೈಸೆಗೂ ಕೇಳುವವರು ಇಲ್ಲದೆ ಚರಂಡಿಗೆ ಹಾಕಿ ಬಂದಿರುವುದೂ ಇದೆ. ಕೃಷಿಕರಾದ ನಾವು ತೀರಾ ದಡ್ಡರೇನಲ್ಲ. May be, we have been exploited, but we are not so much of a fool ನಾವು ಸ್ವಲ್ಪ ಬುದ್ಧಿವಂತರಾಗಿದ್ದೆವೆ. ಯಾವ ಬೆಳೆಗೆ ಹೆಚ್ಚು ಬೆಲೆ ಸಿಗುತ್ತದೋ ಅದನ್ನು ಬೆಳೆಯುವ ಚತುರತೆ ನಮಗೂ ಇದೆ. ಮಾಗಡಿ, ಆನೇಕಲ್ಲು, ಕುಣಿಗಲ್, ಹುಲಿಯೂರುದುರ್ಗ ಆ ಭಾಗದಲ್ಲಿ ಮೈಸೂರು ರೇಷ್ಮೆ ಬಿತ್ತನೆಗೂಡಿನ ಬೆಳೆಯೊಂದನ್ನು ಬಿಟ್ಟರೆ ಮತ್ತೆ

ಯಾವುದೇ ಬೆಳೆಯನ್ನು ಬೆಳೆಯಲು ಸಾಧ್ಯವಿಲ್ಲ. ಇಲ್ಲಿನ ರೈತರಿಗೆ ಇದೊಂದೇ ಕಂಪಲ್‌ಷನ್ ಇರುವುದು. ನೀವು ಎಷ್ಟಕ್ಕಾದರೂ ಕೊಂಡುಕೊಳ್ಳಿ ಅದನ್ನೇ ಬೆಳೆಯಬೇಕು, ಇಲ್ಲಿ ರೈತರು ಬಲವಂತವಾಗಿ ಈ ಬೆಳೆಯನ್ನು ಬೆಳೆಯಬೇಕಾಗಿದೆ. ರೇಷ್ಮೆ ಸಚಿವರು ಇದನ್ನು ಅರ್ಥ ಮಾಡಿಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ನಮ್ಮ ಮುಖ್ಯವಾದ ಪ್ರಶ್ನೆ ಎಂದರೆ ಕೃಷಿ ಉತ್ಪನ್ನಗಳ ಬೆಲೆಯಲ್ಲಿನ ಅನಿಶ್ಚಿತತೆ. ತೆಂಗಿನಕಾಯಿಯ ಬೆಲೆ ಒಂದು ಸಲ ಹತ್ತು ರೂಪಾಯಿಗಳಾದರೆ ಮತ್ತೊಂದು ಸಲ ಎರಡು ರೂಪಾಯಿಗಳಿಗೆ ಬರುತ್ತದೆ. ಆಲೂಗಡ್ಡೆಯ ಬೆಲೆಯೂ ಹಾಗೆಯೇ ಆಗುತ್ತದೆ. ಕೃಷಿ ಉತ್ಪನ್ನಗಳ ಬೆಲೆಯ ಕುಸಿತವಾಗುವುದರ ಜೊತೆಗೆ ಇದರ ಬೆಲೆಯಲ್ಲಿ ಆಗುವಂಥ ಅನಿಶ್ಚಿತತೆ ಸಹ ಬಹಳ ಮುಖ್ಯವಾದ ಸಮಸ್ಯೆಯೆಂದು ನಾನು ಭಾವಿಸಿದ್ದೇನೆ. ಈ ಅನಿಶ್ಚಿತತೆ ಹಾಗೂ ಬೆಲೆ ಕುಸಿತದ ಪರಿಣಾಮವನ್ನು ನಿಭಾಯಿಸುವುದಕ್ಕೆ ಏನು ಮಾಡಬೇಕೆಂಬ ವಿಶ್ಲೇಷಣೆಯನ್ನು ನಾನು ಮಾಡಬಯಸುತ್ತೇನೆ. ಕೃಷಿ ಕ್ಷೇತ್ರದಲ್ಲಿ ಬೆಳೆ ಮತ್ತು ಬೆಲೆ ಎರಡೂ ಬಹಳ ಪ್ರಾಮುಖ್ಯವಾದುದು. ನಮ್ಮ ಬೆಳೆಗಳಿಗೆ ಉತ್ತಮವಾದಂಥ ಬೆಲೆ ಸಿಗಬೇಕು ಹಾಗೂ ನಮಗೆ ಉತ್ತಮವಾದಂಥ ಬೆಳೆಯೂ ಆಗಬೇಕು. ಉತ್ತಮವಾದಂಥ ಬೆಳೆ ಬೆಳೆಯಲು ಗೊಬ್ಬರ ಕೊಡುವುದು, ಔಷಧಿಗಳನ್ನು ಕೊಡುವುದು ಮುಂತಾದ ವಿಷಯಗಳನ್ನು ನಾನು ಬೇಸಾಯ ಇಲಾಖೆಗೆ ಸೀಮಿತವಾಗಿ ನಾನು ಬಿಟ್ಟುಬಿಡುತ್ತೇನೆ. ಇವೊತ್ತಿನ ಸಮಸ್ಯೆ ಇರುವುದು ಬೇಸಾಯ ಇಲಾಖೆಯಲ್ಲಲ್ಲ, ಮಾರುಕಟ್ಟೆ ಇಲಾಖೆಯಲ್ಲಿದೆ. ಮಾರುಕಟ್ಟೆಯ ವಿಚಾರದಲ್ಲಿರುವ ಸಮಸ್ಯೆಗಳನ್ನು ತಮ್ಮ ಮೂಲಕ ಸದನಕ್ಕೆ, ಸದನದ ಮೂಲಕ ರಾಜ್ಯದ ಜನತೆಗೆ ನನ್ನ ಅಭಿಪ್ರಾಯಗಳನ್ನು ನಿವೇದನೆ ಮಾಡಿಕೊಳ್ಳಲು ಸನ್ಮಾನ್ಯ ಅಧ್ಯಕ್ಷರು ದಯವಿಟ್ಟು ನಾಳೆಗೆ ಅವಕಾಶ ಮಾಡಿಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಸಭೆಯ ದಿನದ ಕಾರ್ಯಕಲಾಪಗಳನ್ನು ಇಲ್ಲಿಗೆ ಮುಕ್ತಾಯಗೊಳಿಸುತ್ತದೆ. ಮುಂದುವರಿದ ಸಭೆಯು ನಾಳೆ ಬೆಳಿಗ್ಗೆ 10-30 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ 6-32 ಗಂಟೆಗೆ ಮುಕ್ತಾಯಗೊಂಡು ಪುನಃ
ದಿನಾಂಕ: 10-11-2000 ದಂದು ಬೆಳಿಗ್ಗೆ 10-30 ಗಂಟೆಗೆ ಪುನಃ ಸೇರಲು ನಿಶ್ಚಯಿಸಿತು)